ಓ ಎಸ್ ನಂ.70/2022
ಸಿ.ಡಬ್ಲ್ಯೂ -1 ಮಲ್ಲಿನಾಥ ತಂದೆ ವಿಜಯಕುಮಾರ ಮಾಶಾಳ

**(ಇಂದು ದಿನಾಂಕಃ 17-2-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ನಾನು ಸ್ಥಳಕ್ಕೆ ಹೋಗುವ ಮೊದಲು ಮೇಮೋ ಆಫ್ ಇನ್ಸಟ್ರಕ್ಷನ್ಸ ಮತ್ತು ನ್ಯಾಯಾಲಯದ ಆದೇಶ ತೆಗೆದುಕೊಂಡು ಹೋಗಿದ್ದೆ. ನಾನು ಗ್ರಾಮ ನಕಾಶೆ ಮೂಲ ಟಿಪ್ಪಣಿ ಮತ್ತು ಆಕಾರಬಂದ ದಾಖಲೆಗಳನ್ನೂ ಕೂಡಾ ತೆಗೆದುಕೊಂಡು ಸ್ಥಳಕ್ಕೆ ಹೋಗಿದ್ದೆ. ಸ್ಥಳದಲ್ಲಿ ಸರ್ವೆ ನಂಬರ ೭೮ ರಲ್ಲಿನ ೨ ಎಕರೆ ೩೯ ಗುಂಟೆ ಜಮೀನು ಇತ್ತು. ಸದರಿ ೨ ಎಕರೆ ೩೯ ಗುಂಟೆ ಜಮೀನು ನಾನು ಅಳತೆ ಮಾಡಿರುತ್ತೇನೆ. ನಿಸಿ-೨ ನಕ್ಷೆಯಲ್ಲಿ ಗುಲಾಬಿ ಬಣ್ಣದಲ್ಲಿ ತೋರಿಸಿದ ೨ ಎಕರೆ ೨೩ ಗುಂಟೆ ಜಮೀನು ಸೋಮಶೇಖರರವರ ಸ್ವಾಧೀನದಲ್ಲಿ ಇರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ.

೨. ನಾನು ನೀಡಿದ ನಿಸಿ-೨ ನಕ್ಷೆಯಲ್ಲಿ ತೋರಿಸಿದ ನೀಲಿ ಬಣ್ಣದ ಜಮೀನು ೬ ಎಕರೆ ೬ ಗುಂಟೆ ಮತ್ತು ೨೬ ಗುಂಟೆ ಸಹದೇವಪ್ಪರವರ ಸ್ವಾಧೀನದಲ್ಲಿ ಇರುತ್ತದೆ ಎಂದು ತೋರಿಸಿದ ಜಮೀನಿನ ಅಳತೆಯನ್ನು ನಾನು ಮೂಲ ಟಿಪ್ಪಣಿ ದಾಖಲೆ ನೋಡಿ ತಿಳಿಸಿರುತ್ತೇನೆ. ನಾನು ಟಿಪ್ಪಣಿ ಜೊತೆಗೆ ಸ್ವಾಧೀನದ ಆಧಾರದ ಮೇಲೆ ನಕ್ಷೆಯನ್ನು ತೋರಿಸಿರುತ್ತೇನೆ. ಸರ್ವೆ ನಂಬರ ೭೮ ರಲ್ಲಿ ೧ ಎಕರೆ ರಸ್ತೆ ಇರುವ ಕುರಿತು ಅಳತೆ ಮಾಡಿರುತ್ತೇನೆ. ನಾನು ಸರ್ವೆ ನಂಬರ ೭೭ ರಲ್ಲಿ ಎಷ್ಟು ರಸ್ತೆ ಇದೆ ಎಂದು ಅಳತೆ ಮಾಡಿರುವುದಿಲ್ಲ. ಪ್ರತಿವಾದಿಗಳು ನಾನು ಸರಿಯಾಗಿ ರಸ್ತೆ ಅಳೆದಿಲ್ಲ ಎಂದು ಪ್ರತಿವಾದಿಗಳು ತಕರಾರು ಮಾಡಿದ ಕುರಿತು ಪಂಚನಾಮೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ.

೩.	ಸರ್ವೆ ನಂಬರ ೭೮ ರ ೨೧ ಎಕರೆ ೨೫ ಗುಂಟೆ ಜಮೀನಿನ ಅಳತೆಯನ್ನು ನಾನು ಮಾಡಿರುತ್ತೇನೆ. ನಾನು ಆ ಕುರಿತು ವರದಿಯಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಸದರಿ ಜಮೀನು ತೋರಿಸಿರುತ್ತೇನೆ. ಸರ್ವೆ ನಂಬರ ೭೮ ರಲ್ಲಿನ ಭಾಗಗಳನ್ನು ನಾನು ಬೇರೆ-ಬೇರೆಯಾಗಿ ಅಳತೆ ಮಾಡಿರುತ್ತೇನೆ. ಅದನ್ನು ವರದಿಯಲ್ಲಿ ನಮೂದಿಸಿರುತ್ತೇನೆ. ನಾನು ಬೇರೆ-ಬೇರೆಯಾಗಿ ಅಳತೆ ಮಾಡಿರುತ್ತೇನೆ ಎಂದು ಶಬ್ದ ಬರೆದಿಲ್ಲ ಆದರೆ ಆ ಕುರಿತು ಬೇರೆ-ಬೇರೆಯಾಗಿಯೆ ಅಳತೆಯನ್ನು ನಮೂದಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.